## ಕಲ್ಪನೆ ಕಾವ್ಯ



## ತನ್ನಪ್ಪನಂತೆ...

ಜಗದಪ್ಪ ಬಂದಾಗ
ಮೈದಡವುತ್ತಾಳೆ ಭೂ ತಾಯಿ
ಎಲ್ಲರಿಗೂ ಎಚ್ಚರ
ನಿತ್ಯ ಕರ್ಮ ಮುಗಿಸಿ
ಕಾಯಕದ ಅವಸರ

ಅಂತೇ ನಾನೂ ಹೊರಡುತ್ತೇನೆ...

ನನ್ನವ್ವಳ ಒಡಲಿಗೆ
ಕ್ಷಮೆ ಕೋರಿ
ನೇಗಿಲ ಊರಿ
ಸಾಗುತ್ತೇವೆ ನಾನು ಮತ್ತು
ನನ್ನೆರಡು ಎತ್ತು
ಒಂದೇ ನೇರದಲ್ಲಿ
ಬಿತ್ತುತ ಬೆವರಲ್ಲಿ

ಭೇದವಿರದೇ ಎಲ್ಲರೆದೆಯ
ಮೆಚ್ಚ ಮಾಡುವ ಸೂರ್ಯ
ಭುವಿಯ ಬೆಚ್ಚ ಮಾಡುತ್ತಾನೆ
ತಾಯಿ ಮಡಿಲು ಸೇರಿದ ಬೀಜ
ಬಿಸುಪನುಂಡು ತನ್ನಪ್ಪನಂತಾಗುತ್ತಾನೆ
ಗಿಡವಾಗಿ ಕಾಯಾಗಿ ತೆನೆಯಾಗಿ
ಒಡಲ ತುಂಬುತ್ತಾನೆ
ಭೇದ ತೋರದೇ ಎಲ್ಲರ ಹಸಿವ
ತಣಿಸಿ ಕಾಯುತ್ತಾನೆ!
ಅವನಪ್ಪನಂತೆ...

**ಚಿದಂಬರ ಕುಲಕರ್ಣಿ**

## ಎರಡೆತ್ತಿನ ಸರದಾರ

ಮೂಡಲದ ಕದ ತೆರೆದು ಬೆಳಕು ಹರಿವ ಮುನ್ನ
ಎರಡೆತ್ತಿನ ಸರದಾರ ಹೊಲಕ ಎದ್ದು ಬಂದ
ದಣಿವಿಲ್ಲದೆ ದಿನವೆಲ್ಲ ಮಣ್ಣಿನ ಮಗನಾಗಿ
ಹಂತಿಯ ಪದ ಹಾಡಿ, ನೇಗಿಲ ಹೂಡಿ ನಿಂದ

ಬಿಸಲೇರಿ ಸುಡುವಾಗ ಬೆವರಿಳಿದು ಹರಿವಾಗ
ನಗು ನಗುತಾ ನಲುಮೆಯಲಿ ಹೊಲ ಬಿತ್ತಿದ
ಹರಕಂಗಿ ತೊಟ್ಟರೂ ಅಳ್ಳೆತ್ತಿ ಸುಟ್ಟರೂ
ಕಸಕಿತ್ತಿ ಹಸನು ಮಾಡಿ ಮಳೆಗೆ ಕಾದ

ಅವ್ವ ಕಟ್ಟಿದ ಬುತ್ತಿ ಪ್ರೀತಿಯಲಿ ಬಿಚ್ಚಿದ
ಕಟಕ ರೊಟ್ಟಿಯ ಮ್ಯಾಲೆ ಖಾರದ ಪುಡಿ
ನೀರು ಕುಡಿದು ಮಲಗಿದ ಮಕ್ಕಳು ನೆನಪಾದರು
ಹಸಿವಿದ್ದರು ಉಣಲಾಗದೆ ಗಳೆ ಹೂಡಿದ

ಬೀಜ ಮೊಳೆತ ಮೇಲೆ ಜಗವೆಲ್ಲ ಹೂ ಹಸಿರು
ತೂಗಿದ ತೆನೆ ಕಾಳಲಿ ಸ್ವರ್ಗ ಕಂಡ
ಧೋತರದ ಚುಂಗಿನಲಿ ಬಿಳಿ ಜೋಳ ಬೆಳಸಿ
ಹುಗ್ಗಿ ಪಾಯಸಕು ಮಿಗಿಲು ತಿನ್ನು ಎಂದ

ಸರಿರಾತ್ರಿ ಸಮಯದಲಿ ದಿಗ್ಗನೆ ತಾ ಎದ್ದು
ದನಕರು ಸತಿ ಸುತರ ಮೈದಡವಿದ
ಒಳಗೊಂದು ಹೊರಗೊಂದು ಎರಡೆರಡು
ಗುಣವಿಲ್ಲ
ಸಂತೆಯಲಿ ನಿಂತ ಸಂತ ಯೋಗಿ ಎನಿಸಿದ

**ಲಲಿತಾ ಕೆ ಹೊಸಪ್ಯಾಟಿ**